# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1217(1343) |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ಆದೇಶ ಸಂಖ್ಯೆ: ಎಸ್ ಎಲ್‌ಪಿ 2021, ದಿನಾಂಕ: 07.04.2021 ರಂತೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 10 ಕೋಟಿ ರೂ. ಅನುದಾನ ಮಂಜೂರಾಗಿರುವುದು ನಿಜವೇ; | 2021-22ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನ ಮಾಡುತ್ತಿರುವ ಪ್ರಗತಿ ಕಾಲೋನಿ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರದ ಆದೇಶ ಸಂಖ್ಯೆ: ಸಕಇ 405 ಎಸ್‌ಎಲ್‌ಪಿ 2021, ದಿ:03-02-2022 ಮತ್ತು ತಿದ್ದುಪಡಿ ಆದೇಶ ದಿ:07-04-2022 ರಲ್ಲಿ ರೂ.1000.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಮೊದಲನೇ ಕಂತಿನಲ್ಲಿ ರೂ.250.00 ಲಕ್ಷಗಳನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>ಅದರನ್ವಯ, ಮಂಜೂರು ಮಾಡಿರುವ ಅನುದಾನಕ್ಕೆ ಅನುಗುಣವಾಗಿ ಕೈಗೊಳ್ಳಲಾಗಿರುವ 14 ಕಾಮಗಾರಿಗಳ ಪೈಕಿ, 01 ಕಾಮಗಾರಿ ಪೂರ್ಣಗೊಂಡಿದ್ದು, 13 ಕಾಮಗಾರಿಗಳನ್ನು ಪ್ರಾರಂಭವಾಗಿರುವುದಿಲ್ಲ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಆರ್ಥಿಕ ಇಲಾಖೆಯ ಸುತ್ತೋಲೆ ಸಂ: ಆಇ 1 ಟಿಎಫ್‌ಪಿ 2023, ದಿ:31-07-2023ರಲ್ಲಿ ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ |
| ಆ | ಹಾಗಿದ್ದಲ್ಲಿ, ಯಾವ ಯಾವ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡಲಾಗಿತ್ತು; ಇದುವರೆಗೂ ಎಷ್ಟು ಅನುದಾನ ಬಿಡುಗಡೆಯಾಗಿದೆ: ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು. | |
| ಇ | ಈವರೆಗೆ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ: ಎಷ್ಟು ಕಾಮಗಾರಿಗಳು ಬಾಕಿ ಇದೆ; ಬಾಕಿ ಇರಲು ಕಾರಣಗಳೇನು? ಯಾವಾಗ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು? | |

| | | |
|---|---|---|
| | | ತೆಗೆದುಕೊಳ್ಳಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳು ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾರಂಭವಾಗದ 13 ಕಾಮಗಾರಿಗಳಿಗೆ ಆರ್ಥಿಕ ಇಲಾಖೆಯ ಸುತ್ತೋಲೆಯನ್ವಯ ಮರು ಮಂಜೂರಾತಿ ನೀಡುವ ಪ್ರಸ್ತಾವನೆಯು ಕಡತ ಸಂ: SWD/ INFR / CHB1 (COH)/45/2023 (E-1202906) ರಲ್ಲಿ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ:ಸಕಇ 477 ಎಸ್ಎಲ್‌ಪಿ 2025

(ಡಾ. ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1217 (1343) ಕ್ಕೆ ಅನುಬಂಧ.

ಸರ್ಕಾರದ ಆದೇಶ ಸಂ: ಸಕಇ-405: ಎಸ್‌ಎಲ್‌ಪಿ-2021, ದಿ:03-02-2022 ಮತ್ತು ತಿದ್ದುಪಡಿ ಆದೇಶ ದಿ:07-04-2022ರಲ್ಲಿ ಮಂಜೂರು ಮಾಡಿರುವ ರೂ.1000.00 ಲಕ್ಷಗಳಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಕಾಮಗಾರಿಯ ಪ್ರಗತಿಯ ಹಂತ |
|---|---|---|---|
| 1 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ತೇಗೂರು ಗ್ರಾಮ ಪಂಚಾಯಿತಿ ಆದಿಶಕ್ತಿನಗರದ ಒಳಭಾಗದಲ್ಲಿ ರಸ್ತೆ ಕಾಂಕ್ರೀಟೀಕರಣ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ | 20.00 | ಪೂರ್ಣಗೊಂಡಿದೆ |
| 2 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು, ಹಿರೇಗೌಜ ಗ್ರಾಮ ಪಂಚಾಯಿತಿ, ಚಿಕ್ಕಗೌಜದಿಂದ ಹಿರೇಗೌಜ ಕಾಲೋನಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ | 30.00 | ಪ್ರಾರಂಭಿಸಬೇಕಾಗಿದೆ |
| 3 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು, ಬೆಳವಾಡಿ ಗ್ರಾಮ ಪಂಚಾಯಿತಿ ಬೆಳವಾಡಿಯಿಂದ ಬೂಚೇನಹಳ್ಳಿ ಕಾವಲು ರಸ್ತೆ ಅಭಿವೃದ್ಧಿ | 50.00 | ಪ್ರಾರಂಭಿಸಬೇಕಾಗಿದೆ |
| 4 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಕಡೂರು ತಾಲ್ಲೂಕು ನಾಗರಾಳು ಗ್ರಾಮ ಪಂಚಾಯಿತಿ ಕಬ್ಬಳ್ಳಿ ತಾಂಡ್ಯಾದಿಂದ ಗುಣಸಾಗರ ಕಾಲೋನಿ ಮೂರ್ತಿನಾಯ್ಕನ ಮನೆವರೆಗೆ ರಸ್ತೆ ಅಭಿವೃದ್ಧಿ | 100.00 | ಪ್ರಾರಂಭಿಸಬೇಕಾಗಿದೆ |
| 5 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ಹಿರೇಗೌಜ ಗ್ರಾಮ ಪಂಚಾಯಿತಿ, ಸಾದರಹಳ್ಳಿ ಕಾಲೋನಿಯಿಂದ ಕ್ಯಾತನಬೀಡು ರಸ್ತೆ ಡಾಂಬರೀಕರಣ | 100.00 | ಪ್ರಾರಂಭಿಸಬೇಕಾಗಿದೆ |
| 6 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ಹಿರೇಗೌಜ ಗ್ರಾಮ ಪಂಚಾಯಿತಿ ಹಿರೇಗೌಜ ಕಾಲೋನಿಯಿಂದ ಕುರಿಚಿಕ್ಕನಹಳ್ಳಿವರೆಗೆ ರಸ್ತೆ ಡಾಂಬರೀಕರಣ | 50.00 | ಪ್ರಾರಂಭಿಸಬೇಕಾಗಿದೆ |
| 7 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ಲಕ್ಯಾ ಗ್ರಾಮ ಪಂಚಾಯಿತಿ, ಲಕ್ಯಾ ಅಂಬೇಡ್ಕರ್ ಕಾಲೋನಿಯಿಂದ ಕ್ಯಾತನಬೀಡು ರಸ್ತೆ ಡಾಂಬರೀಕರಣ | 200.00 | ಪ್ರಾರಂಭಿಸಬೇಕಾಗಿದೆ |
| 8 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ಲಕ್ಕಮ್ಮನಹಳ್ಳಿ ಗ್ರಾಮ ಪಂಚಾಯಿತಿ, ಕುನ್ನಾಳು ಗ್ರಾಮದಿಂದ ಸಖರಾಯಪಟ್ಟಣ ಕಡೇಕಾಲುವೆ ರಸ್ತೆ ಡಾಂಬರೀಕರಣ | 200.00 | ಪ್ರಾರಂಭಿಸಬೇಕಾಗಿದೆ |
| 9 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ಚಿಕ್ಕಮಗಳೂರು ತಾಲ್ಲೂಕು ಐ.ಡಿ.ಪೀಠ ಗ್ರಾಮ ಪಂಚಾಯಿತಿ ನೆತ್ತಿಚೌಕದಿಂದ ಕೆಸವಿನಮನೆ ರಸ್ತೆ ಅಭಿವೃದ್ಧಿ | 130.00 | ಪ್ರಾರಂಭಿಸಬೇಕಾಗಿದೆ |
| 10 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ತೇಗೂರು ಗ್ರಾಮ ಪಂಚಾಯಿತಿ, ರಾಂಪುರ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಬಾಕ್ಸ್ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ | 20.00 | ಪ್ರಾರಂಭಿಸಬೇಕಾಗಿದೆ |
| 11 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಕಡೂರು ತಾಲ್ಲೂಕು ಎಸ್.ಬಿದರೆ ಗ್ರಾಮ ಪಂಚಾಯಿತಿ ಜೋಡಿಲಿಂಗದಹಳ್ಳಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ | 30.00 | ಪ್ರಾರಂಭಿಸಬೇಕಾಗಿದೆ |
| 12 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚಿಕ್ಕಮಗಳೂರು ತಾಲ್ಲೂಕು ಹಿರೇಕೊಳಲೆ ಗ್ರಾಮ ಪಂಚಾಯಿತಿ ಹೊಸಪುರ ಚಿಕ್ಕೊಳಲೆ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ | 30.00 | ಪ್ರಾರಂಭಿಸಬೇಕಾಗಿದೆ |
| 13 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಕಡೂರು ತಾಲ್ಲೂಕು ನಿಡಘಟ್ಟ ಗ್ರಾಮ ಪಂಚಾಯಿತಿ, ನೀರುಗುಂಡಿ ತಾಂಡ್ಯಾ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ | 20.00 | ಪ್ರಾರಂಭಿಸಬೇಕಾಗಿದೆ |
| 14 | ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಕಡೂರು ತಾಲ್ಲೂಕು ನಾಗರಾಳು ಗ್ರಾಮ ಪಂಚಾಯಿತಿ ಕಬ್ಬಳ್ಳಿ ತಾಂಡ್ಯಾ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ | 20.00 | ಪ್ರಾರಂಭಿಸಬೇಕಾಗಿದೆ |
| | ಒಟ್ಟು | 1000.00 | |

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು